63

**ಕರ್ನಾಟಕ ಸರ್ಕಾರ**

ಸರಕು ಖರೀದಿ ಇಲಾಖೆ

ತಂತಿ: ಸ್ಟೋರ್ಸ್ ಸಪ್ಲೈ.

ಕ್ರಮಾಂಕ: ಸ.ಖ.ಇ-ಪಿ1-ವಿ.ಸ.172-(80)
86-87.

ಸರಕು ಖರೀದಿ ನಿರ್ದೇಶನಾಲಯ
17ನೇ ಮಹಡಿ, ಜನೋಪಯೋಗಿ ಸೌಧ,
ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560 001
4.6.86

ಗೆ

ಎಲ್ಲಾ ಇಲಾಖೆಯ ಮುಖ್ಯಾಧಿಕಾರಿಗಳಿಗೆ,
(ಕರ್ನಾಟಕ ಸರಕಾರ)

ಮಾನ್ಯರೇ,

ವಿಷಯ:- ಬಿಳಿ ಡ್ರಿಲ್ ಬಟ್ಟೆ ಮೆ: ಶ್ರೀ ಕೃಷ್ಣರಾಜೇಂದ್ರ ಮಿಲ್ಸ್‌ರವರಿಂದ ದರಕರಾರು ಮುಖಾಂತರ ಸರಬರಾಜು ಬಗ್ಗೆ ವಿ.ಸಂ.ಪಿ1-ಆರ್‌ಸಿ-172-ಸೆಪ್ಟೆ.80-223-ಮಾರ್ಚಿ 81.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ ತಮ್ಮ ಗಮನವನ್ನು ಈ ಇಲಾಖೆಯ ದಿನಾಂಕ 8-4-82 ರ ಸುತ್ತೋಲೆಗೆ ಸೆಳೆಯಲಾಗಿದೆ. ಮೆ: ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿ.ರವರು ತಮ್ಮ ಇಲಾಖೆಗೆ ಮಾಡಿರುವ ಸರಬರಾಜು ಬಗ್ಗೆ ವರದಿಯನ್ನು ಕರೆಯಲಾಗಿತ್ತು. ಆದರೆ ತಮ್ಮಿಂದ ಯಾವ ವರದಿಯು ಬಂದಿರುವುದಿಲ್ಲ. ಆದುದರಿಂದ ಮುಂದಿನ ಕ್ರಮ ಕೈಗೊಳ್ಳಲು ಕೆಳಕಂಡ ಮಾಹಿತಿಯನ್ನು ಒದಗಿಸಲು ಕೋರಲಾಗಿದೆ.

6838
20-6-86

1) ನಿಮ್ಮ ಸರಬರಾಜು ಆದೇಶದ ದಿನಾಂಕ ಮತ್ತು ಪ್ರಮಾಣ.
2) ಸರಬರಾಜು ಮಾಡಿದ ದಿನಾಂಕ ಮತ್ತು ಪ್ರಮಾಣ.
3) ಸರಬರಾಜಿನಲ್ಲಿ ಏನಾದರೂ ವಿಳಂಬ ಆಗಿದೆಯೇ?
4) ಮಾಡಿದ ಸರಬರಾಜಿನ ಪಾರ್ತಿ 80 ಶೇಕಡ ಸಂದಾಯ ಆಗಿದೆಯೇ.
5) ಸಂಸ್ಥೆಯವರ ಠೇವಣಿಗಳ ಮರುಪಾವತಿ ಮಾಡಲು ಏನಾದರೂ ಅಭ್ಯಂತರ ಇದೆಯೇ.

ಮೇಲ್ಕಂಡ ಮಾಹಿತಿಯನ್ನು ದಯವಿಟ್ಟು ದಿನಾಂಕ 30-6-86ರ ಒಳಗೆ ಕಳಿಸುವ ಏರ್ಪಾಡನ್ನು ಮಾಡಲು ಕೋರಲಾಗಿದೆ. ತಪ್ಪಿದಲ್ಲಿ ಸಂಸ್ಥೆಯವರು ಮಾಡಿದ ಸರಬರಾಜು ಸಮಾಧಾನಕರವಾಗಿ ಇದೆ ಎಂದು ಪರಿಗಣಿಸಿ, ಅವರ ಠೇವಣಿಗಳು ನಿಮ್ಮ ಜವಾಬ್ದಾರಿ ಮೇಲೆ ಹಿಂತಿರುಗಿಸಲಾಗುವುದು.

ತಮ್ಮ ವಿಶ್ವಾಸಿ,

(ಜೆ.ಸಿ.ಕುಸುಮಕುಮಾರಿ)
ಸಹಾಯಕ ನಿರ್ದೇಶಕರು-II
ಸರಕು ಖರೀದಿ ಇಲಾಖೆ.

Office of the Deputy Commissioner
Mysore District, MYSORE
18 JUN 1986
ಜಿಲ್ಲಾಧಿಕಾರಿಗಳ ಕಛೇರಿ
ಮೈಸೂರು ಜಿಲ್ಲೆ, ಮೈಸೂರು

18/6/86